# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1049/2021
ಪಿ.ಓ. ಎಆರ್‌ಇ-06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 02/11/2021.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಶ್ರೀಶೈಲ ಅಣ್ಣೆಪ್ಪ ಹುಡಿಮನಿ ಬಿನ್ ಅಣ್ಣೆಪ್ಪ ಹುಡಿಮನಿ, ಪತ್ರಾಂಕಿತ ವ್ಯವಸ್ಥಾಪಕರು ಮತ್ತು ಪ್ರಭಾರ ಉಪ ಆಡಳಿತಾಧಿಕಾರಿಗಳು, ಕೃಷ್ಣಾ ಕಾಡಾ ಕಚೇರಿ, ಭೀಮರಾಯನಗುಡಿ, ಶಹಪುರ ತಾಲ್ಲೂಕು, ಯಾದಗಿರಿ ಜಿಲ್ಲೆ ಇವರು ದುರ್ನಡತೆ ಎಸಗಿರುವ ಬಗ್ಗೆ.

*****

1) ಯಾದಗಿರಿ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರು (ಇನ್ನು ಮುಂದೆ "ತನಿಖಾಧಿಕಾರಿ"ಯವರು ಎಂದು ಕರೆಯಲ್ಪಡುತ್ತಾರೆ). ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಶ್ರೀಶೈಲ ಅಣ್ಣೆಪ್ಪ ಹುಡಿಮನಿ ಬಿನ್ ಅಣ್ಣೆಪ್ಪ ಹುಡಿಮನಿ, ಪತ್ರಾಂಕಿತ ವ್ಯವಸ್ಥಾಪಕರು ಮತ್ತು ಪ್ರಭಾರ ಉಪ ಆಡಳಿತಾಧಿಕಾರಿಗಳು, ಕೃಷ್ಣಾ ಕಾಡಾ ಕಚೇರಿ, ಭೀಮರಾಯನಗುಡಿ, ಶಹಪುರ ತಾಲ್ಲೂಕು, ಯಾದಗಿರಿ ಜಿಲ್ಲೆ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ). ಶ್ರೀ. ಸುರೇಶ್ ಬಿನ್ ಜಗನ್ನಾಥ್ ಕುಲಕರ್ಣಿ, ಕೃಷ್ಣಾ ಕಾಡಾ ಕಚೇರಿ, ಭೀಮರಾಯನಗುಡಿ, ಶಹಪುರ ತಾಲ್ಲೂಕು, ಯಾದಗಿರಿ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ). ದೂರುದಾರರು ಎದುರುದಾರರನ್ನು ಭೇಟಿಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 7 ರಡಿ ತನಿಖೆ ಕೈಗೊಂಡಿದೆ.

2) ದೂರುದಾರರಾದ ಶ್ರೀ.ಸುರೇಶ್ ಬಿನ್ ಜಗನ್ನಾಥ್ ಕುಲಕರ್ಣಿರವರು ದಿನಗೂಲಿ ನೌಕರರಾಗಿ 1984ರಿಂದ 1994ರವರೆಗೆ ಕೆಲಸ ನಿರ್ವಹಿಸಿ, 1994ರಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ಖಾಯಂ ನೌಕರರಾಗಿರುತ್ತಾರೆ. 1998ರಲ್ಲಿ ದ್ವಿತೀಯ ದರ್ಜೆಯ ಸಹಾಯಕ ಹುದ್ದೆಯಿಂದ ದ್ವಿತೀಯ ದರ್ಜೆಯ ಲೆಕ್ಕ ಸಹಾಯಕರ ಹುದ್ದೆಯಲ್ಲಿ ವೃಂದ ಬದಲಾವಣೆಗೊಂಡು ಕಾಡ ಭೀಮರಾಯನಗುಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ನಂತರ ಎರಡು ವರ್ಷದ ಅವಧಿಯಲ್ಲಿ 2000ನೇ ಸಾಲಿನಲ್ಲಿ ಇಲಾಖಾ ಪರೀಕ್ಷೆ ಪಾಸಾಗಿದ್ದರೂ ಸಹ ಸದರಿ ಹುದ್ದೆಯಲ್ಲಿ ಸ್ಥಿರೀಕರಣ (ವಿಲೀನ)ಗೊಳಿಸದೆ, ಸ್ಥಿರೀಕರಣಗೊಂಡಿಲ್ಲವೆಂದು

ಹೇಳಿ ಏಪ್ರಿಲ್ 2014ನೇ ಸಾಲಿನಲ್ಲಿ ಪದೋನ್ನತಿ ನೀಡಬೇಕಾಗಿದ್ದರೂ ಸಹ ನೀಡಿರುವುದಿಲ್ಲ. ದೂರುದಾರರು ಈ ಬಗ್ಗೆ ಸ್ಥಿರೀಕರಣ ಹಾಗೂ ಮುಂಬಡ್ತಿಗಾಗಿ ಜುಲೈ 2016 ರಲ್ಲಿ ಎದುರುದಾರರನ್ನು ವಿಚಾರಿಸಿದಾಗ ಎದುರುದಾರರು ದೂರುದಾರರಿಗೆ ಸ್ಥಿರೀಕರಣ ಮತ್ತು ಮುಂಬಡ್ತಿಗಾಗಿ ಕಾಗದಪತ್ರಗಳನ್ನು ಪುಟ್‌ಅಪ್ ಮಾಡಲು ದೂರುದಾರರಿಂದ 18,000/- ರೂ.ಗಳನ್ನು ತೆಗೆದುಕೊಂಡಿದ್ದು ಇರುತ್ತದೆ. ನಂತರ ಸದರಿ ಕೆಲಸವನ್ನು ಮಾಡಿಕೊಡದೆ ದೂರುದಾರರಿಗೆ "2004ರಲ್ಲಿಯೇ ಕೆಲಸಮಾಡಿಸಿಕೊಳ್ಳಬೇಕಾಗಿತ್ತು, ಇದು ಹಿಂದಿನ ದಿನಾಂಕದ್ದಾಗಿದ್ದು ಇಷ್ಟು ದಿವಸ ಏಕೆ ಬಿಟ್ಟಿರುತ್ತೀರಿ" ಅದನ್ನೆಲ್ಲಾ ಸರಿಪಡಿಸಬೇಕಾದರೆ ಇನ್ನೂ ಒಂದು ಲಕ್ಷ ರೂಪಾಯಿ ಲಂಚದ ಹಣ ಕೊಡಬೇಕೆಂದು ಲಂಚದ ಹಣಕ್ಕೆ ಎದುರುದಾರರು ಬೇಡಿಕೆ ಇಟ್ಟಿರುತ್ತಾರೆ. ದೂರುದಾರರು ದಿ: 14/10/2016 ರ ದಿನಾಂಕಕ್ಕೆ ವಾರದ ಹಿಂದೆ ಎದುರುದಾರರನ್ನು ಭೇಟಿ ಮಾಡಿ ಒಂದು ಲಕ್ಷ ರೂಪಾಯಿ ಕೊಡಲು ಆಗುವುದಿಲ್ಲವೆಂದು ತಿಳಿಸಿದಾಗ, ಎದುರುದಾರರು ಲಂಚದ ಹಣವನ್ನು 50,000/- ರೂ. ಗೆ ಇಳಿಸಿದ್ದು, ಆ ಬಗ್ಗೆ ನಡೆದ ಮಾತುಕತೆಯ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ನೀಡಲು ಇಷ್ಟವಿಲ್ಲದ್ದರಿಂದ, ದೂರುದಾರರು ದಿ: 14/10/2016 ರಂದು ಯಾದಗಿರಿ ಎಸಿಬಿ ಪೋಲೀಸ್ ಠಾಣೆಗೆ ಹಾಜರಾಗಿ ಆ ಬಗ್ಗೆ ದೂರನ್ನು ನೀಡಿರುತ್ತಾರೆ. ಈ ಬಗ್ಗೆ ಯಾದಗಿರಿ ಎಸಿಬಿ ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ಠಾಣೆಯ ಗುನ್ನೆ ನಂ.03/2016 ರಲ್ಲಿ ಕಲಂ 7, 13(1) (ಡಿ) ರ ಜೊತೆ 13(2) ಭ್ರಷ್ಟಾಚಾರ ನಿಗ್ರಹ ಕಾಯಿದೆ 1988 ರಡಿಯಲ್ಲಿ ಎದುರುದಾರರಾದ ವಿರುದ್ಧ ಪ್ರ.ವ.ವ. ವರದಿ ದಾಖಲು ಮಾಡಿರುತ್ತಾರೆ.

ದಿ: 14/10/2016ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಸಮಯದಲ್ಲಿ ದೂರುದಾರರು ನೀಡಿದ ಮೊಬೈಲ್‌ನಲ್ಲಿದ್ದ ಸಂಭಾಷಣೆಗಳನ್ನು ಪಂಚಸಾಕ್ಷಿದಾರರಿಗೆ ಕೇಳಿಸಿ, ಅದನ್ನು ಜಪ್ತಿಪೂರ್ವ ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ದೂರುದಾರರು ಹಾಜರುಪಡಿಸಿದ 1,000/- ರೂ. ಮುಖಬೆಲೆಯ 50 ನೋಟುಗಳ ವಿವರಗಳನ್ನು ಪಂಚನಾಮೆಯಲ್ಲಿ ನಮೂದಿಸಿ, ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿ, ದೂರುದಾರರಿಗೆ ನೀಡಿ ಇತರೆ ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳು ಸಾಕ್ಷಿ ಹಾಗೂ ಪಂಚಸಾಕ್ಷಿ ಸಮಕ್ಷಮ ನಿರ್ವಹಿಸಿರುತ್ತಾರೆ.

ದಿ: 14/10/2016ರಂದು ದೂರುದಾರರು, ಪಂಚಸಾಕ್ಷಿದಾರರು ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರ ತಂಡ ಎದುರುದಾರರ ಕಚೇರಿ ಬಳಿ ಬಂದಿರುತ್ತಾರೆ. ಅದೇ ದಿನ ಸುಮಾರು ಸಂಜೆ 5.30ರ ಸಮಯದಲ್ಲಿ ನೆರಳುಸಾಕ್ಷಿಯೊಂದಿಗೆ ದೂರುದಾರರು ಎದುರುದಾರರ ಕಚೇರಿಗೆ ಹೋಗಿದ್ದು, ನೆರಳುಸಾಕ್ಷಿ ಬಾಗಿಲ ಹೊರಗಡೆ ನಿಂತಿದ್ದು, ಆಗ ಎದುರುದಾರರು ದೂರುದಾರರನ್ನು ಒಳಗೆ ಕರೆದು ಲಂಚದ ಹಣ ತಾ ಅಂತ ಕೇಳಿ 50,000/- ರೂ.ಗಳನ್ನು ದೂರುದಾರರು ನೀಡಿದಾಗ, ಆ ಹಣವನ್ನು ಎದುರುದಾರರು ಬಲಗೈನಿಂದ ಪಡೆದುಕೊಂಡು, ಎರಡೂ ಕೈಗಳಿಂದ ಎಣಿಸಿ, ಶರ್ಟಿನ ಮೇಲಿನ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಹೊರಬಂದು ಕೈರಟ್ಟೆ ಕೆರೆಯುವ ಮೂಲಕ ಸನ್ನೆ ಮಾಡಿರುತ್ತಾರೆ. ಆಗ ತನಿಖಾಧಿಕಾರಿಯು, ತಮ್ಮ ಸಿಬ್ಬಂದಿಗಳು ಮತ್ತು ಪಂಚ ಸಾಕ್ಷಿಯೊಂದಿಗೆ ಎದುರುದಾರರ ಕಚೇರಿಗೆ ಧಾವಿಸಿದಾಗ ದೂರುದಾರರು ತೋರಿಸಿದ ಎದುರುದಾರರನ್ನು ವಶಕ್ಕೆ ಪಡೆದು

ತನಿಖಾಧಿಕಾರಿಯವರು ಸಿಬ್ಬಂದಿಗಳ ಮುಖಾಂತರ ಸೋಡಿಯಂ ಕಾರ್ಬೋನೆಟ್ ದ್ರಾವಣವನ್ನು ತಯಾರಿಸಿ ಆ ದ್ರಾವಣವನ್ನು ಎರಡೂ ಬಟ್ಟಲುಗಳಲ್ಲಿ ಹಾಕಿ ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈಯನ್ನು ಅದ್ದಿ ತೊಳೆಸಿದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈಯನ್ನು ಅದ್ದಿ ತೊಳೆಸಿದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ದ್ರಾವಣಗಳನ್ನು ತನಿಖಾಧಿಕಾರಿಯು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯು ದೂರುದಾರರಿಂದ ಪಡೆದ ಹಣದ ಬಗ್ಗೆ ವಿಚಾರಿಸಿದಾಗ ಆ ಹಣವು ಶರ್ಟಿನ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿ, ಆ ಹಣವನ್ನು ತೆಗೆದು ಟೇಬಲ್ ಮೇಲೆ ಇಟ್ಟಿದ್ದು, ಆಗ ತನಿಖಾಧಿಕಾರಿಯು ಎದುರುದಾರರಿಗೆ ಬದಲಿ ಶರ್ಟ್ ವ್ಯವಸ್ಥೆ ಮಾಡಿ, ಧರಿಸಿದ್ದ ಶರ್ಟನ್ನು ಪಡೆದು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಆ ಶರ್ಟಿನ ಜೇಬನ್ನು ಅದ್ದಿಸಿ ತೊಳೆದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ದ್ರಾವಣವನ್ನು ಮತ್ತು ಶರ್ಟನ್ನು ತನಿಖಾಧಿಕಾರಿಯು ವಶಕ್ಕೆ ಪಡೆದಿರುತ್ತಾರೆ. ಟೇಬಲ್ ಮೇಲೆ ಇಟ್ಟಿದ್ದ ಲಂಚದ ಹಣದ ವಿವರಗಳನ್ನು ಪಂಚಸಾಕ್ಷಿಗಳ ಮುಖಾಂತರ ಪರಿಶೀಲಿಸಿ ನೋಡಲಾಗಿ ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳಿಗೆ ವಿವರಗಳು ತಾಳೆಯಾದ್ದರಿಂದ ಆ ನೋಟುಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ಹೇಳಿದಾಗ ಎದುರುದಾರರು ಸಮಜಾಯಿಷಿಯಲ್ಲಿ ದೂರುದಾರರು 50,000/- ರೂ. ಕೊಟ್ಟು ಹೋಗಿರುವರು ಏಕೆ ಅಂತ ಕೇಳುವಷ್ಟರಲ್ಲಿ ಹಾಗೆ ಹೋದರು ಅಂತ ಸಮಜಾಯಿಷಿ ಬರೆದುಕೊಟ್ಟಿದ್ದು, ದೂರುದಾರರು ಮತ್ತು ನೆರಳುಸಾಕ್ಷಿ ಎದುರುದಾರರು ನೀಡಿದ ಸಮಜಾಯಿಷಿಯನ್ನು ಅಲ್ಲಗಳೆದಿರುತ್ತಾರೆ ಮತ್ತು ಎದುರುದಾರರು ಸತಾಯಿಸಿ, ಪ್ರಥಮ ದರ್ಜೆಯ ಲೆಕ್ಕಸಹಾಯಕರ ಹುದ್ದೆಗೆ ಸ್ಥಿರೀಕರಣ ಹಾಗೂ ಮುಂಬಡ್ತಿ ಮಾಡಲು 50,000/- ರೂ. ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ. ಇತರೆ ಎಲ್ಲಾ ಔಚಿತ್ಯಪೂರ್ವ ನಡೆವಳಿಕೆಗಳನ್ನು ಎಲ್ಲರ ಸಮಕ್ಷಮ ನಿರ್ವಹಿಸಿ, ನಂತರ ಎಲ್ಲಾ ದಾಖಲಾತಿಗಳನ್ನು ಕಲೆಹಾಕಿ ಯಾದಗಿರಿ ಭ್ರಷ್ಟಾಚಾರ ನಿಗ್ರಹದಳ ಠಾಣೆಯಪೊಲೀಸ್ ನಿರೀಕ್ಷಕರು ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3) ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರಿಂದ ಆಕ್ಷೇಪಣೆಗಳನ್ನು ಪಡೆಯಲಾಗಿದ್ದು, ಸದರಿ ಆಕ್ಷೇಪಣೆಯಲ್ಲಿ ಅವರ ಮೇಲಿರುವ ಆಪಾದನೆಯನ್ನು ಅಲ್ಲಗಳೆದಿರುತ್ತಾರೆ. ಅವರ ಆಕ್ಷೇಪಣೆಯ ಪ್ಯಾರಾ 2 ರಲ್ಲಿ ದೂರುದಾರರು ಹಣವನ್ನು ಟೇಬಲ್ ಮೇಲೆ ಇಡುತ್ತಿದ್ದಾಗ ಏಕೆ ಅಂತ ಕೇಳುವಷ್ಟರಲ್ಲಿ ಕೋಣೆಯಿಂದ ಹೊರ ಹೋದರು. ಅವರು ಹೋದ ನಂತರ ಆ ಹಣವನ್ನು ಜೇಬಿನಲ್ಲಿ ಇಟ್ಟುಕೊಂಡಿದ್ದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಂದ ವಶಪಡಿಸಿಕೊಂಡ ಮುದ್ದೇಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ತಜ್ಞರ ವರದಿಯಲ್ಲಿ ಕಂಡುಬರುತ್ತದೆ. ಎದುರುದಾರರು ನೀಡಿರುವ ಕಾರಣಗಳು ಈ ಪ್ರಕರಣದಿಂದ ಕೈ ಬಿಡುವ ಬಗ್ಗೆ ಸಮಂಜಸವಾಗಿರುವುದಿಲ್ಲ ಮತ್ತು ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡು ಬರುವುದಿಲ್ಲ.

4) ದೂರು ಅರ್ಜಿ ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5) ಆದ್ದರಿಂದ ಈ ಪ್ರಕರಣದಲ್ಲಿನ ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ) ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಹಾಗೂ ಎದುರುದಾರರು ದಿನಾಂಕ 31/05/2019 ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಕೆ.ಸಿ.ಎಸ್. ಆರ್. ನಿಯಮ 214 (2)( ಬಿ) (1) ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಬೇಕೆಂದು ಕೋರಿ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

4/11/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.